<u>ಕರ್ನಾಟಕ ಸರ್ಕಾರ</u>

<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ</u>

ಆಯುಕ್ತರ ಕಛೇರಿ, ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–52.

ಸಂ:ಹಿಂವಕಇ/ತ–1/ಪಪೂತ/ಸಿಆರ್–09/2019–20 ದಿನಾಂಕ:04.07.2020

<u>ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿ – 2019–20</u>

<u>ಅಭ್ಯರ್ಥಿಗಳಿಗೆ ಸೂಚನೆಗಳು</u>

1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಾವುದಾದರೂ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಗೆ ಆಯ್ಕೆಯಾಗಿದ್ದರೆ/ತರಬೇತಿಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳು ಪುನಃ ಪರೀಕ್ಷಾ ಪೂರ್ವ ತರಬೇತಿಗೆ ಅರ್ಹರಿರುವುದಿಲ್ಲ.

2. ಕೇಂದ್ರ/ರಾಜ್ಯ ಸರ್ಕಾರ/ಅನುದಾನಿತ ಸಂಸ್ಥೆಗಳು/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಪರೀಕ್ಷಾ ಪೂರ್ವ ತರಬೇತಿಗೆ ಅರ್ಹರಿರುವುದಿಲ್ಲ.

3. ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲು ಆನ್‌ಲೈನ್ ಮುಖಾಂತರ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಇಲಾಖಾ ವೆಬ್‌ಸೈಟ್ www.backwardclasses.kar.in ನಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಸಂಸ್ಥೆಗಳ ಆದ್ಯತೆಯನ್ನು ನಮೂದಿಸುವುದು ಹಾಗೂ ನಿಗದಿತ ದಾಖಲೆಗಳನ್ನು (ಪದವಿ ಪ್ರಮಾಣ ಪತ್ರ, ಬ್ಯಾಂಕ್ ಖಾತೆ ವಿವರ ಹಾಗೂ ವಿಶೇಷ ಚೇತನ ಅಭ್ಯರ್ಥಿ ಆಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ) <u>**ದಿನಾಂಕ:08.07.2020 ಸಂಜೆ 5.00 ಗಂಟೆಯೊಳಗೆ**</u> ತಪ್ಪದೇ upload ಮಾಡುವುದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಸದರಿ ಪರೀಕ್ಷಾ ಪೂರ್ವ ತರಬೇತಿಗಾಗಿ ಪರಿಗಣಿಸುವುದಿಲ್ಲ.

4. ಅಭ್ಯರ್ಥಿಯು ಈಗಾಗಲೇ ಆನ್ ಲೈನ್ ಅರ್ಜಿಯಲ್ಲಿ ತಪ್ಪು ಮಾಹಿತಿಯನ್ನು ಒದಗಿಸಿದ್ದಲ್ಲಿ ತರಬೇತಿಗೆ ಪರಿಗಣಿಸಲಾಗುವುದಿಲ್ಲ.

5. ದಿನಾಂಕ:08.09.2019 ರಂದು ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಪ್ರವರ್ಗವಾರು ಮೆರಿಟ್/ಮಹಿಳೆ/ವಿಶೇಷ ಚೇತನ ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ 2ನೇ ಪಟ್ಟಿಯಲ್ಲಿನ ಸೀಮಿತ ಅಭ್ಯರ್ಥಿಗಳು ಮಾತ್ರ ಇಲಾಖಾ ವೆಬ್‌ಸೈಟ್ <u>www.backwardclasses.kar.nic.in</u> ಅನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ಸಂಸ್ಥೆಗಳ ಆದ್ಯತೆಯನ್ನು ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಲೋಕಸೇವಾ ಆಯೋಗ ನಡೆಸುವ ನಾಗರೀಕ ಸೇವಾ ಪರೀಕ್ಷೆಗೆ ಇಲಾಖೆಯಿಂದ ನೀಡುವ ಪೂರ್ವಭಾವಿ ತರಬೇತಿಗೆ ಲಭ್ಯವಿರುವ ಸ್ಥಾನಗಳಿಗಿಂತ ಸ್ವಲ್ಪ ಹೆಚ್ಚಿನ ಸಂಖ್ಯೆಗೆ ಕಾಯ್ದಿರಿಸಿದ ಪಟ್ಟಿಯನ್ನು ತಯಾರಿಸಲಾಗಿದ್ದು, ಪ್ರವರ್ಗವಾರು ಮೆರಿಟ್ ಹಾಗೂ ಮೀಸಲಾತಿ ಅನ್ವಯ ಲಭ್ಯವಿರುವ ಸ್ಥಾನಗಳು ಭರ್ತಿಯಾಗದೇ ಉಳಿಕೆಯಾದಲ್ಲಿ ಮಾತ್ರ ಅಂತಹ ಅಭ್ಯರ್ಥಿಗಳನ್ನು (ಕಾಯ್ದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳು) ತರಬೇತಿಗೆ ನಿಯಮಾನುಸಾರ ಪರಿಗಣಿಸಲಾಗುವುದು.

6. <u>ಅಭ್ಯರ್ಥಿಯು ತರಬೇತಿಗೆ ಆಯ್ಕೆಯಾದಲ್ಲಿ ಸಲ್ಲಿಸಬೇಕಾದ ದಾಖಲೆಗಳು (ದಾಖಲೆಗಳನ್ನು ಸಲ್ಲಿಸಬೇಕಾದ ವಿಳಾಸವನ್ನು ಮುಂದಿನ ದಿನಗಳಲ್ಲಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು):</u>

   a. ಅಭ್ಯರ್ಥಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ಪ್ರತಿ.

b. ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಭ್ಯರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್, ಎಂ.ಐ.ಸಿ.ಆರ್. ಕೋಡ್, ಶಾಖೆಯ ಹೆಸರು ಇತ್ಯಾದಿ ವಿವರ ಹೊಂದಿರುವ ಬ್ಯಾಂಕ್ ಪಾಸ್ ಬುಕ್‌ನ ಮುಟದ ಜೆರಾಕ್ಸ್ ಪ್ರತಿ.

c. ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮುಚ್ಚಳಿಕೆ ಪತ್ರದ ವಿವರ ಹಾಗೂ ನಿಬಂಧನೆಗಳನ್ನು ರೂ.20/- ರ ಛಾಪಾ ಕಾಗದದಲ್ಲಿ ನಮೂದಿಸಿ ಅಭ್ಯರ್ಥಿ ಮತ್ತು ಪೋಷಕರ ಸಹಿ ಹಾಗೂ ದಿನಾಂಕ ನಮೂದಿಸಿರುವ ಮುಚ್ಚಳಿಕೆ ಪತ್ರದ ಮೂಲ ಪ್ರತಿ (Original) ಯನ್ನು ಸಲ್ಲಿಸುವುದು.

d. ಪಾಸ್‌ಪೋರ್ಟ್ ಅಳತೆಯ ಅಭ್ಯರ್ಥಿಯ ಇತ್ತೀಚಿನ 3 ಭಾವಚಿತ್ರಗಳ ಹಿಂದೆ ಅಭ್ಯರ್ಥಿಯು ತನ್ನ ಹೆಸರು, ಪ್ರವರ್ಗ, ತರಬೇತಿಯ ಹೆಸರು (IAS) ಮತ್ತು ವರ್ಷ (2019-20) ಎಂಬ ವಿವರವನ್ನು ನಮೂದಿಸಿ ನೀಡುವುದು.

7. ಅಭ್ಯರ್ಥಿಗಳು ಒಮ್ಮೆ ಆನ್ ಲೈನ್ ನಲ್ಲಿ ನಮೂದಿಸುವ ಸಂಸ್ಥೆಗಳ ಆದ್ಯತೆಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ತರಬೇತಿ ಸಂಸ್ಥೆಗಳು ಹಾಗೂ ಇಲಾಖೆಯಿಂದ ತರಬೇತಿ ಅವಧಿಗೆ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ನೀಡಲಾಗುವ ಮಾಸಿಕ ಇಂಟರ್‌ನೆಟ್ ವೆಚ್ಚದ ವಿವರ ಈ ಕೆಳಗಿನಂತಿದೆ.

| ಕ್ರ ಸಂ. | ತರಬೇತಿ ಸಂಸ್ಥೆಗಳು | ತಲಾ ಅಭ್ಯರ್ಥಿಗೆ ಮಾಸಿಕ ಇಂಟರ್‌ನೆಟ್ ವೆಚ್ಚ | ತರಬೇತಿ ಅವಧಿ |
|---|---|---|---|
| 1 | ALTERNATIVE LEARNING SYSTEMS PRIVATE LTD, NEW DELHI | ರೂ.1,000/- ಗಳು | ಕನಿಷ್ಠ 7 ರಿಂದ ಗರಿಷ್ಠ 9 ತಿಂಗಳು |
| 2 | SRI RAMS IAS , NEW DELHI | | |
| 3 | LA EXCELLENCE, HYDERABAD | | |
| 4 | R.C.REDDY, HYDERABAD | | |
| 5 | BRAIN TREE, HYDERABAD | | |
| 6 | Universal Coaching Center, BENGALURU | | |
| 7 | SPARDHA MITRA COACHING CENTRER, BENGALURU | | |
| 8 | SPARDHA CHAITRA, BENGALURU | | |
| 9 | JICE ACADEMY FOR EXCELLENCE PVT LTD, BENGALURU | | |
| 10 | IASBABA, BENGALURU | | |
| 11 | THINK AND LEARN PVT LTD(BYJU'S) , BENGALURU | | |

8. ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ:

a. ತರಬೇತಿ ಸಂಸ್ಥೆಗಳಿಗೆ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳಿಗೆ ಐ.ಎ.ಎಸ್. ಪರೀಕ್ಷೆಗೆ ಸಂಬಂಧಿಸಿದಂತೆ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಹಾಗೂ ಒಂದು ಐಚ್ಛಿಕ ವಿಷಯವನ್ನು ಒಳಗೊಂಡಂತೆ ಸಮಗ್ರ ತರಬೇತಿಯನ್ನು ನೀಡಲಾಗುವುದು.

b. ಮೇಲ್ಕಂಡ ಸಂಸ್ಥೆಗಳು ಅಭ್ಯರ್ಥಿ ಇಚ್ಛಿಸುವ ಯಾವುದಾದರು ಐಚ್ಛಿಕ ವಿಷಯ (optional subject) ವನ್ನು ಬೋಧಿಸಲು ಆಗದಿದ್ದ ಸಂದರ್ಭದಲ್ಲಿ, ಅಭ್ಯರ್ಥಿಗಳು ತಾವೇ ಖುದ್ದು ಆ ವಿಷಯದ ಬಗ್ಗೆ ಸಿದ್ಧತೆಯನ್ನು ನಡೆಸಬೇಕು. ಬೇರೆ ಯಾವುದೇ ಸಂಸ್ಥೆಯಿಂದ ಇಲಾಖೆಯು ಅಂತಹ ಐಚ್ಛಿಕ ವಿಷಯದ ತರಬೇತಿ ವ್ಯವಸ್ಥೆಯನ್ನು ಮಾಡಲು ಅವಕಾಶವಿರುವುದಿಲ್ಲ.

c. ಅಭ್ಯರ್ಥಿಯು ತರಬೇತಿಯನ್ನು ಪೂರ್ಣಗೊಳಿಸದೇ ಯಾವುದೇ ಸಂದರ್ಭದಲ್ಲಿ ಮೊಟಕುಗೊಳಿಸಿದಲ್ಲಿ, ಅಂತಹ ಅಭ್ಯರ್ಥಿಗಳಿಂದ ಅವರ ತರಬೇತಿಗೆ ಸರ್ಕಾರ ಭರಿಸಿರುವ ಪೂರ್ಣ ವೆಚ್ಚವನ್ನು ವಸೂಲಿ ಮಾಡಲಾಗುವುದು.

d. ಅಭ್ಯರ್ಥಿಗಳು ಪ್ರತಿ ತಿಂಗಳು ಶೇ.85 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಇಲ್ಲದಿದ್ದಲ್ಲಿ ಇಂಟರ್‌ನೆಟ್ ವೆಚ್ಚವನ್ನು ಪಾವತಿಸಲಾಗುವುದಿಲ್ಲ. ಪ್ರತಿ ತಿಂಗಳು 3 ದಿನಗಳಿಗಿಂತ ಹೆಚ್ಚಿನ ಅವಧಿಗೆ ಗೈರು-ಹಾಜರಾದಲ್ಲಿ, ಆ ಅವಧಿಗೆ ಇಂಟರ್‌ನೆಟ್ ವೆಚ್ಚವನ್ನು ಕಡಿತಗೊಳಿಸಲಾಗುವುದು.

ಸಹಿ/-<br>
ಆಯುಕ್ತರು,<br>
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>
ಬೆಂಗಳೂರು